ಟೆಂಡರ್ ಪ್ರಕಟಣೆ ಕ್ರಮಸಂಖ್ಯೆ:ಕಾ.ನಿ.ಇ.ಗ್ರಾ.ಕು.ನೀ.ಸ&ನೈ:ವಿ:ಮಂ:ಟೆಂಡರ್:ಎಇ-1:2026-27/526 ದಿನಾಂಕ :-17-06-2026

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ ಅನುಬಂಧದಲ್ಲಿ ಸೂಚಿಸಿದ ಕಾಮಗಾರಿಗಳಿಗೆ ನೋಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಐಟಂವಾರು ಟೆಂಡರ್‌ನ್ನು ನಮೂದಿಸಿದ ದಿನಾಂಕಗಳಂದು ಸಾಯಂಕಾಲ 5.00 ಘಂಟೆಯವರೆಗೆ https://kppp.karnataka.gov.in ವೆಬ್ ಸೈಟ್‌ನಲ್ಲಿ ಸ್ವೀಕರಿಸಲಾಗುವುದು.

| ಕ್ರ ಸಂ | ಕಾಮಗಾರಿಗಳ ಹೆಸರು | ಟೆಂಡರಿಗಿಟ್ಟ ಮೊತ್ತ (ಲಕ್ಷಗಳಲ್ಲಿ) | EMD (ಲಕ್ಷಗಳಲ್ಲಿ) | ಗುತ್ತಿಗೆದಾರರ ಮೀಸಲಾತಿ ವಿವರ | ನಿರ್ವಹಣೆ ಅವಧಿ | ಗುತ್ತಿಗೆದಾರರ ಅರ್ಹತೆ (ದರ್ಜೆ) |
|---|---|---|---|---|---|---|
| **2215-2025-26ರ (O&M) ರಾಜ್ಯವಲಯ ಲೆಕ್ಕಶೀರ್ಷಿಕೆ ಅಡಿಯಲ್ಲಿ** | | | | | | |
| 1 | ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಸರಪಾಡಿ ಮತ್ತು ಇತರೆ 95 ಜನವಸತಿ ಪ್ರದೇಶಗಳಿಗೆ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಕಾರ್ಯಾಚರಣೆ ನಿರ್ವಹಣೆ(O&M) ಕಾಮಗಾರಿ | 124.00 | 2.00 | ಸಾಮಾನ್ಯ | 1 ವರ್ಷ | 3ನೇ ದರ್ಜೆ ಮೇಲ್ಪಟ್ಟು (ಸಿವಿಲ್) |

| | |
|---|---|
| 1) KPP Portalನಲ್ಲಿ ಟೆಂಡರ್ ದಾಖಲೆಗಳನ್ನು Download ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ | 17-06-2026 ರಿಂದ 25-06-2026ರ ಸಂಜೆ 5.00 ಗಂಟೆಯವರೆಗೆ |
| 2) ವಿಚಾರಣಾ/ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ | 23-06-2026ರ ಸಂಜೆ 4.00 ಗಂಟೆಗೆ |
| 3) ಟೆಂಡರನ್ನು ತೆರೆಯುವ ದಿನಾಂಕ | 29-06-2026 ಪೂರ್ವಾಹ್ನ 11.30 |

**ನಿಬಂಧನೆಗಳು:**

1 ಟೆಂಡರ್‌ಗಳನ್ನು (ಕೆ.ಪಿ.ಪಿ.ಪಿ.ನ Platform ಮೂಲಕ) Online ನಲ್ಲಿ ನಿಗದಿತ ದಿನಾಂಕದಂದು ಸಲ್ಲಿಸಬೇಕಾಗಿರುತ್ತದೆ.

2 ಭದ್ರತಾ ಠೇವಣಿಯನ್ನು ಟೆಂಡರ್ ಅಂಗೀಕೃತವಾದ ಮೊತ್ತಕ್ಕೆ ಸರ್ಕಾರದ ಆದೇಶದಂತೆ ನಿಶ್ಚಿತ ಠೇವಣಿ (FD) ರೂಪದಲ್ಲಿ ಸಲ್ಲಿಸಬೇಕು.

3 ಗುತ್ತಿಗೆದಾರರು ಟೆಂಡರ್‌ಗಿಡಲಾದ ಮೊತ್ತಕ್ಕಿಂತ ಕಡಿಮೆ ನಮೂದಿಸಿದಲ್ಲಿ, ಯಶಸ್ವಿಯಾದ ಗುತ್ತಿಗೆದಾರರು, ಗುತ್ತಿಗೆ ಕರಾರಿನ ಸಮಯದಲ್ಲಿ ವ್ಯತ್ಯಾಸದ ಮೊಬಲಗಿಗೆ ನಿಶ್ಚಿತ ಠೇವಣಿ (FD)/ಡಿ.ಡಿ ರೂಪದಲ್ಲಿ ಪಡೆದು ಈ ಕಛೇರಿಗೆ ಸಲ್ಲಿಸಿ ಕರಾರು ಒಪ್ಪಂದ ಮಾಡಿಕೊಳ್ಳುವುದು.

4 ಯಾವ ಕಾರಣವನ್ನು ತಿಳಿಸದೆ, ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯು ಕಾಯ್ದಿರಿಸಿಕೊಂಡಿರುತ್ತಾರೆ.

5 ಇಲಾಖೆಯಿಂದ ಯಾವುದೇ ಸಾಮಾಗ್ರಿಗಳನ್ನು ಸರಬರಾಜು ಮಾಡುವುದಿಲ್ಲ. ಕಾಮಗಾರಿಗೆ ಅವಶ್ಯವಿರುವ ಸಾಮಾಗ್ರಿಗಳನ್ನು ಭಾರತೀಯ ಮಾನಕ ಸಂಸ್ಥೆಯ ಗುಣಮಟ್ಟದಂತೆ ಗುತ್ತಿಗೆದಾರರೇ ಸ್ವಂತ ಖರ್ಚಿನಲ್ಲಿಯೇ ಖರೀದಿ ಮಾಡಿಕೊಳ್ಳಬೇಕು ಹಾಗೂ

6 ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ, ಪ್ರಗತಿಯಲ್ಲಿರುವ ಹಾಗೂ ಪೂರ್ಣಗೊಂಡ ನಂತರ 3 ಹಂತದ ಛಾಯ ಚಿತ್ರಗಳನ್ನು ದಾಖಲೆಗೆ ಸಲ್ಲಿಸಬೇಕು.

7 ಸಾರ್ವಜನಿಕ ಸಂಗ್ರಹಣೆಯ ವಿಶೇಷ ಕಾಯ್ದೆ 2000ದಂತೆ ಗೊತ್ತುಪಡಿಸಿರುವ ಪಾರದರ್ಶಿಕೆಯ ನಿಯಮ, ನಿಬಂಧನೆಗಳು ಅನ್ವಯವಾಗುತ್ತದೆ.

8 ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಮಂಗಳೂರು ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

9 ಕಾಮಗಾರಿಗಳನ್ನು ತೃಪ್ತಕರವಾಗಿ ಪೂರ್ಣಗೊಳಿಸಿದ ದಿನಾಂಕದಿಂದ ಒಂದು ವರ್ಷದವರೆಗೆ ಕಾಮಗಾರಿಯ ನಿರ್ವಹಣಾ ಲೋಪಗಳಿಗೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.

10 ನಿಬಂಧನೆಗೊಳಪಡದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

11 ಯೋಜನೆಯಡಿ ನಿರ್ಮಾಣ ಮಾಡಿದ ಕಾಮಗಾರಿಯನ್ನು 3rd Party ತಪಾಸಣೆಗೆ ಒಳಪಡಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ವೆಚ್ಚವನ್ನು ಗುತ್ತಿಗೆದಾರರೇ ಭರಿಸುವುದು.

12 ಗುತ್ತಿಗೆದಾರರು ಇದೇ ರೀತಿ ಕಾಮಗಾರಿಗಳನ್ನು ನಿರ್ವಹಿಸಿರುವ ವಿವರಗಳನ್ನು/ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳನ್ನು ಟೆಂಡರ್ ಸಲ್ಲಿಸುವಾಗ ಸ್ಕ್ಯಾನ್ ಮಾಡಿ ಲಗತ್ತಿಸತಕ್ಕದ್ದು.

13 ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಗುತ್ತಿಗೆದಾರರ ಬಿಲ್ಲಿನಲ್ಲಿ ಶೇ. 1% ರಷ್ಟು ಕಾರ್ಮಿಕ ಕಲ್ಯಾಣ ಸುಂಕವನ್ನು ಕಡಿತಗೊಳಿಸಲಾಗುವುದು.

14 Joint Venture ನಲ್ಲಿ ಸಲ್ಲಿಸಿದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.

15 ಅನುಮೋದಿತ ಟೆಂಡರ್ ಮೊತ್ತಕ್ಕೆ ಸರ್ಕಾರದ ಆದೇಶದಂತೆ GSTನ್ನು ಪ್ರತ್ಯೇಕವಾಗಿ ನೀಡಲಾಗುವುದು.

16 ಮೇಲ್ಕಾಣಿಸಿದ EMD ಮೊತ್ತವು ಟೆಂಡರಗಿಟ್ಟ ಮೊತ್ತಕ್ಕೆ ನಮೂದಿಸಿದ್ದು ವಾಸ್ತವಿಕ EMD ಮೊತ್ತವನ್ನು ಇ–ಪ್ರೊಕ್ಯೂರ್ ಮೆಂಟ್ ವೇದಿಕೆಯಲ್ಲಿ ನಮೂದಿಸಲಾಗುವುದು.

17 ವಾಸ್ತವಿಕ ಕೆಲಸ ಮುಕ್ತಾಯ ಅವಧಿಯನ್ನು ಕರಾರು ಒಪ್ಪಂದದ ಸಮಯದಲ್ಲಿ ನೀಡಲಾಗುವುದು

18 ಟೆಂಡರ್ ಸಮಯದಲ್ಲಿ ನೀಡಲಾಗುವ ಬಿಡ್ ಡಾಕ್ಯುಮೆಂಟ್ ಪ್ರಕಾರ ಕ್ರಮ ವಹಿಸಲಾಗುವುದು.

17.06.2026

ಕಾರ್ಯನಿರ್ವಾಹಕ ಇಂಜಿನಿಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ದ.ಕ. ವಿಭಾಗ ಮಂಗಳೂರು.

<u>ಪ್ರತಿಯನ್ನು ಕೆಳಕಂಡವರ ಅವಗಾಹನೆಗೆ ಸಲ್ಲಿಸಲಾಗಿದೆ.</u>

1. ಪ್ರಧಾನ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, 2 ನೇ ಮಹಡಿ, ಇ ಬ್ಲಾಕ್, ಕೆ.ಹೆಚ್.ಬಿ ಆವರಣ, ಕಾವೇರಿ ಭವನ, ಕೆಜಿ. ರಸ್ತೆ, ಬೆಂಗಳೂರು.
2. ಅಧೀಕ್ಷಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವೃತ್ತ ಕಛೇರಿ, ಮಂಗಳೂರು
3. ಜಿಲ್ಲಾಧಿಕಾರಿಗಳು, ದ.ಕ.ಜಿಲ್ಲೆ, ರವರಿಗೆ ಸಲ್ಲಿಸುತ್ತಾ, ಸದರಿ ಪ್ರಕಟನೆಯನ್ನು ತಮ್ಮ ಕಛೇರಿ ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು.

<u>ಪ್ರತಿಯನ್ನು ಕೆಳಕಂಡವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.</u>

5 ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ/ಗ್ರಾ.ಕು.ನೀ.ನೈ ಉಪವಿಭಾಗ, ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ಇವರಿಗೆ ಪ್ರಕಟಣೆ ಫಲಕದಲ್ಲಿ ಪ್ರಕಟಿಸಲು

6 ಕಾರ್ಯಪಾಲಕ ಅಭಿಯಂತರರ ಮೇಜಿಗೆ

7 ವಿಭಾಗದ ಲೆಕ್ಕ ಶಾಖೆಗೆ/ ತಾಂತ್ರಿಕ ಶಾಖೆಗೆ/ ಕಛೇರಿ ನೋಟೀಸ್ ಬೋರ್ಡಿಗೆ/ಹೆಚ್ಚುವರಿ ಪ್ರತಿ.

17.06.2026

ಕಾರ್ಯನಿರ್ವಾಹಕ ಇಂಜಿನಿಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ದ.ಕ. ವಿಭಾಗ ಮಂಗಳೂರು.